# ನಾಟಕ-ಸಿನಿಮಾ ಅಂಟಿದ ನಂಟು

'ವಿಶ್ವ ರಂಗಭೂಮಿ ದಿನಾಚರಣೆ'ಯ ಹಿನ್ನೆಲೆಯಲ್ಲಿ ಕನ್ನಡದ ರಂಗಭೂಮಿ ಮತ್ತು ಸಿನಿಮಾ ನಡುವಣ ನಂಟಿನ ಕುರಿತು ಒಂದು ಹಿನ್ನೋಟ.

★ ಜಗನ್ನಾಥ ಪ್ರಕಾಶ್

**ಮಾರ್ಚ್ 27**
**ವಿಶ್ವ ರಂಗಭೂಮಿ ದಿನ**



'ಎಚ್ಚಮ ನಾಯಕ'ನಾಗಿ ಎಂ.ಪಿ.ಶಂಕರ್



ವಿಜ್ಞಾನದ ಆಟಿಕೆಯಾಗಿ ಹೊರ ಹೊಮ್ಮಿದ ಚಲನಚಿತ್ರಗಳಿಗೆ ಪುರಾತನ ಕಲೆ, ನಾಟಕ, ರಂಗವೇ ಬುನಾದಿ. ಇದು ಸಿನಿಮಾ ಉಗಮಿಸಿದ ನಾಡಿನಿಂದ ನಮ್ಮ ಚಂದನವನದವರೆಗೂ ಸಾರ್ವತ್ರಿಕ. ಷೇಕ್ಸ್‌ಪಿಯರ್‌ರಿಂದ ಮೊದಲೊಂದು ನಮ್ಮ ಕಾಳಿದಾಸ, ಭಾಸ, ಶೂದ್ರಕರೂ ಬಯೋಸ್ಕೋಪ್‌ನಲ್ಲಿ ಮೊದಮೊದಲಿಗೆ ಅರಳಿದವರೇ.

ಭಾರತದ ಬಹುತೇಕ ಎಲ್ಲಾ ಪ್ರದೇಶಿಕ ಭಾಷೆಗಳ ಆರಂಭಿಕ ಚಿತ್ರಗಳೆಲ್ಲಾ ನಮ್ಮ ಪೌರಾಣಿಕ ಸಂಗತಿಗಳಿಂದಲೇ ಕೂಡಿದ್ದವು. ಈ ನೆಲದ ಮನೆ ಮನೆ ಕಥೆಗಳೆಲ್ಲ ಬೆಳ್ಳಿ ಪರದೆಯಲ್ಲಿ ಆರಂಭ ಕಾಲದಲ್ಲಿ ಬಿಚ್ಚಿಕೊಂಡದ್ದು ಈಗ ಇತಿಹಾಸ.

ನಾಟಕ ಮೊದಲಿಗೆ ದೈವಾರಾಧನೆ, ನೀತಿಬೋಧೆಗಳಿಂದ ಶುರುವಾಗಿ ಕಾಲಕ್ರಮೇಣ ಪ್ರಮುಖ ಮನರಂಜನಾ ಮಾಧ್ಯಮವಾಗಿ ಬೆಳೆಯುತಲ್ಲದೆ ಹಲವು ಮಜಲುಗಳನ್ನು ಕಂಡಿತು. ರಾಜ ಮಹಾರಾಜರು ತಮ್ಮ ಆಸ್ಥಾನಗಳಲ್ಲಿ ನಾಟಕ ಮಂಡಳಿಗಳು ಸ್ಥಾಪನೆಗೊಳ್ಳಲು, ಅವು ಮುಂದುವರೆಯಲು ಪ್ರೋತ್ಸಾಹ ನೀಡಿದರು. ಕಲಾ ಪ್ರೌಢಿಮೆ, ಪ್ರತಿಷ್ಠೆಗಳು ರಂಗಭೂಮಿಯಲ್ಲಿದ್ದ ಸಂದರ್ಭದಲ್ಲಿ ಗರಿ ಕೆದರಿದ ವಿಭಿನ್ನ ಮನರಂಜನಾ ಮಾರ್ಗವಾದ ವೃತ್ತಿನಾಟಕ ಜಗತ್ತಿನ ಎಲ್ಲಾ ಭಾಗಗಳಲ್ಲೂ ಮಧ್ಯಮ ವರ್ಗದ ಮುಖ್ಯ ಮನರಂಜನಾ ರಂಗವೆನ್ನಿಸಿಕೊಂಡಿತಲ್ಲದೆ, ಆರ್ಥಿಕ ಲಾಭವನ್ನೇ ಗುರಿಯಾಗಿಟ್ಟುಕೊಂಡು ವ್ಯಾಪಕವಾಗಿ ಹಬ್ಬಿತು.

ವೃತ್ತಿನಾಟಕ ಹಲವು ಕಲೆಗಳು ಒಗ್ಗೂಡಿ ಸಿದ್ಧಗೊಂಡ ಮಾಧ್ಯಮ. ಸಾಹಿತ್ಯ, ಸಂಗೀತ, ಅಭಿನಯ, ಗಾಯನ, ನರ್ತನ ಚಿತ್ರಕಲೆ ಎಲ್ಲವೂ ಇದ್ದ ಈ ವಲಯ ವೈಯಕ್ತಿಕ ನೆಲೆಯಲ್ಲಿ ಆರಂಭವಾಗಿ ಕೊನೆಗೆ ಸಾಂಸ್ಥಿಕ ನೆಲೆಯನ್ನು ಕಂಡುಕೊಂಡಿತು.

ಮನರಂಜನೆ ಮತ್ತು ಹಣ ಸಂಪಾದನೆ– ಎರಡೂ ಗುರಿಗಳನ್ನು ಇಟ್ಟುಕೊಂಡ ವೃತ್ತಿ ರಂಗಭೂಮಿ ಅದಕ್ಕೆ ಅನುಗುಣವಾಗಿ ನಾಟಕ ಪ್ರದರ್ಶನ ಹಾಗೂ ನಾಟಕ ವಿಧಾನಗಳನ್ನು ರೂಪಿಸಿಕೊಳ್ಳಬೇಕಾಗಿ ಬಂತು. ಕಥಾವಸ್ತು,